**File No.KFD/HOFF/A5-6(GFL)/7/2018-FC-KARNATAKA FOREST DEPARTMENT**


ಕರ್ನಾಟಕ ಸರ್ಕಾರ

**GOVERNMENT OF KARNATAKA**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು) ರವರ ಕಚೇರಿ

Office of
Principal Chief Conservator of
Forests
(Head of Forest Force)

ಅರಣ್ಯ ಭವನ, 18 ನೇಅಡ್ಡರಸ್ತೆ
ಮಲ್ಲೇಶ್ವರಂ ಬೆಂಗಳೂರು-560 003
Aranya Bhavan, 18th Cross
Malleshwaram, Bengaluru-560 003
Telephone : 080 2334 6472
Email : apccffc@gmail.com


Old File No.A5(6)/GFL/CR-7/2017-18
E-office File No. KFD/HOFF/A5-6(GFL)/7/2018-FC-KFD

E-63227
ದಿನಾಂಕ 19-11-2019

ಅತೀ ಜರೂರು

ಇವರಿಗೆ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು
ಚಾಮರಾಜನಗರ ವೃತ್ತ, ಚಾಮರಾಜನಗರ

ವಿಷಯ: Diversion of 2.124 hectare of forest land in Cheelandavadi State Forest (Village) Sy No. 1, Uyyamballi Hobli, Kanakapura Taluk, Ramanagar District (Cauvery Wildlife Division) for construction of 66 KV SC line on DC towers from existing 66/11 KV Doddalahalli Sub-station to Proposed 66/11 KV Hegganuru Sub-station (12.238 km distance) in favour of the Executive Engineer (Electrical), Major Works Division, Karnataka Power Transmission Corporation Limited (KPTCL), Old B.M. Road, Ramanagar
Proposal No. FP/KA/TRANS/27085/2017

O/C

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕು (ಕಾವೇರಿ ವನ್ಯಜೀವಿ ವಿಭಾಗ) ಉಯ್ಯಂಬಳ್ಳಿ ಹೋಬಳಿ ಚಿಲಂದವಾಡಿ ರಾಜ್ಯ ಅರಣ್ಯ ಸರ್ವೆ ನಂ . 1 ರಲ್ಲಿ ಪ್ರಸ್ತಾಪಿತ ವಿದ್ಯುತ್ ಪ್ರಸರಣ ಮಾರ್ಗಕ್ಕೆ ಬೇಕಾಗಿರುವ 2.124 ಹೆಕ್ಟೇರ್ ಅರಣ್ಯ ಪ್ರದೇಶವನ್ನು 1980 ರ ಅರಣ್ಯ ಸಂರಕ್ಷಣಾ ಕಾಯ್ದೆಯಡಿ ಬಿಡುಗಡೆಗೊಳಿಸಲು ಈ ಮೇಲೆ ನಮೂದಿಸಿದ ಆನ್ ಲೈನ್ ಪ್ರಸ್ತಾವನೆಯ PART-I, II & III ಗಳಲ್ಲಿ ದಿನಾಂಕ 11-06-2019 ರಂದು ವೆಬ್ ಪೋರ್ಟಲ್ ಮೂಲಕ ಮಾತ್ರ ಸ್ವೀಕೃತಗೊಂಡಿದ್ದು ಪ್ರಸ್ತಾವನೆಯ ಹಾರ್ಡ್ ಕಾಪಿಯು ತಡವಾಗಿ ದಿನಾಂಕ 26-09-2019 ರಂದು ಈ ಕಛೇರಿಯಲ್ಲಿಸ್ವೀಕೃತವಾಗಿರುತ್ತದೆ.

ಈ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿ , ಕಾವೇರಿ ವನ್ಯಜೀವಿ ವಿಭಾಗ ಇವರು ಭರ್ತಿ ಮಾಡಿದ PART- II ನ ಕ್ರಮ ಸಂಖ್ಯೆ 13 (ii) ರಲ್ಲಿ ರಾಮನಗರ ಪ್ರಾದೇಶಿಕ ವಿಭಾಗದಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ರಾಮನಗರ ವಲಯದ ಹುಲ್ತಾರ್ ರಾಜ್ಯ ಅರಣ್ಯ ಸರ್ವೆ ನಂ. 1 ರಲ್ಲಿ ಗುರುತಿಸಿರುವ 4.248 ಹೆಕ್ಟೇರ್ ಕ್ಷೀಣಿತ ಅರಣ್ಯ ಭೂಮಿ (Degraded Forest Land) ಬಗ್ಗೆ ನೀಡಿರುವ CA land sustainable certificate ನ್ನು ಮಾತ್ರ ಎಫ್.ಸಿ. ವೆಬ್ ಪೋರ್ಟಲ್ ನಲ್ಲಿ ಅಪ್ ಲೋಡ್ ಮಾಡಿದ್ದು CA Scheme ಯನ್ನು ಅಪ್ ಲೋಡ್ ಮಾಡಿರುವುದಿಲ್ಲ. ಅಲ್ಲದೇ, CA Scheme ಯ ಹಾರ್ಡ್ ಕಾಪಿಯನ್ನು ಸಲ್ಲಿಸಿರುವುದಿಲ್ಲ . ಇದರಿಂದಾಗಿ ಈ ಪ್ರಸ್ತಾವನೆಯ PART- II ಅಪೂರ್ಣವಾಗಿರುತ್ತದೆ. ಈ ನ್ಯೂನತೆಯನ್ನು ನಿಮ್ಮ ಹಂತದಲ್ಲಿ ಪರಿಶೀಲಿಸದೇ ಅಪೂರ್ಣ ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಿರುವುದರಿಂದ ಅದನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಲು ವಿಳಂಬವಾಗಿರುತ್ತದೆ.

ಆದುದರಿಂದ, ಕೂಡಲೇ ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರ ವಿಭಾಗ ಇವರು ತಯಾರಿಸಿದ **CA Scheme** ಯನ್ನು ಈ ಪ್ರಸ್ತಾವನೆಯ **PART- II** ನ ಕ್ರಮ ಸಂಖ್ಯೆ **13 (ii)** ರಲ್ಲಿ **CA land sustainable certificate** ನೊಂದಿಗೆ (ಒಂದೇ ಪಿ.ಡಿ.ಎಫ್ ಫೈಲ್ ನಲ್ಲಿ) ಅಪ್ ಲೋಡ್ ಮಾಡಿಕೊಂಡು ಹಾರ್ಡ್ ಕಾಪಿ ರೂಪದಲ್ಲಿ ಕೂಡಲೇ ಈ ಕಛೇರಿಗೆ ಕನಿಷ್ಠ ಮೂರು **(3)** ಸೆಟ್ ಗಳನ್ನು **(ಮೂಲಪ್ರತಿಗಳು)** ಮೂರು ದಿನಗಳೊಳಗಾಗಿ ಸಲ್ಲಿಸಲು ಸೂಚಿಸಿದೆ.

ಪ್ರಸ್ತಾವನೆಯ ಆನ್ ಲೈನ್ ಲಿಂಕ್ ನ್ನು ಈ ಮೂಲಕ ನಿಮಗೆ ವರ್ಗಾಯಿಸಿದೆ . ಇದನ್ನು ಕೂಡಲೇ ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾವೇರಿ ವನ್ಯಜೀವಿ ವಿಭಾಗ ಇವರಿಗೆ ವರ್ಗಾಯಿಸಿ ಈ ನ್ಯೂನತೆಗಳನ್ನು ಸರಿಪಡಿಸಿ ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ.

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿ (ಅಸಂಕಾ)

ರವಾನಿಸಲಾಗಿದೆ
ದಿನಾಂಕ 19-11-2019
5:15pm

ಪ್ರತಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾವೇರಿ ವನ್ಯಜೀವಿ ವಿಭಾಗ, ಕೊಳ್ಳೇಗಾಲ ಇವರಿಗೆ ಮಾಹಿತಿಗಾಗಿ ಹಾಗೂ ಮೇಲಿನಂತೆ ಕ್ರಮ ಕೈಗೊಳ್ಳಲು ತಿಳಿಸಿದೆ . ಈ ಪ್ರಸ್ತಾವನೆಯು ಈಗಾಗಲೇ ವಿಳಂಬವಾಗಿರುವುದರಿಂದ ಮುಂದಿನ ದಿನಗಳಲ್ಲಿ ವಿಳಂಬವಾಗದಂತೆ ಎಚ್ಚರಿಕೆ ವಹಿಸಲು ಸೂಚಿಸಿದೆ.

ಪ್ರತಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ರಾಮನಗರ ವಿಭಾಗ, ರಾಮನಗರ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ. ಈ ಪ್ರಸ್ತಾವನೆಗೆ ಸಂಬಂಧಿತ **CA Scheme** ಯನ್ನು ಕೂಡಲೇ ತಯಾರಿಸಿ ಪ್ರತಿಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ , ಕಾವೇರಿ ವನ್ಯಜೀವಿ ವಿಭಾಗ ಇವರಿಗೆ ಕಳುಹಿಸುವುದು . ಇದಲ್ಲದೇ, ಈ ಕಛೇರಿಗೆ ಕನಿಷ್ಠ ಮೂರು **(3)** ಸೆಟ್ ಗಳನ್ನು (ಮೂಲಪ್ರತಿಗಳು) ಮೂರು ದಿನಗಳೊಳಗಾಗಿ ಪ್ರತ್ಯೇಕವಾಗಿ ಸಲ್ಲಿಸಲು ಸೂಚಿಸಿದೆ.

ಪ್ರತಿಯನ್ನು ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಪ್ರಧಾನ ಕಾಮಗಾರಿ ವಿಭಾಗ, ಹಳೇ ಬಿ.ಎಂ. ರಸ್ತೆ, ರಾಮನಗರ – 562 159 ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.